# ಶ್ರೀ ರಾಘವೇಂದ್ರ ವಿಜಯ

## ವಿದ್ವಾನ್ ಆನಂದತೀರ್ಥಾಚಾರ್ಯ ನಾಗಸಂಪಿಗೆ

-Contributed by Sri Ramanatha B,Bangalore www.vijayadasaru.net Team member

ಶ್ರೀರಾಘವೇಂದ್ರ ಗುರುಸಾರ್ವಭೌಮರ ದಿವ್ಯ ವ್ಯಕ್ತಿತ್ವವನ್ನು ಕಣ್ಣಾರೆ ಕಂಡ, ಅವರ ವದನಾರವಿಂದದಿಂದಲೇ ಶಾಸ್ತ್ರಪಾಠವನ್ನು ಕೇಳುವ ಸೌಭಾಗ್ಯ ಪಡೆದ, ಅವರ ಪೂರ್ವಾಶ್ರಮದ ಸೋದರಳಿಯ ಶ್ರೀ ನಾರಾಯಣಾಚಾರ್ಯರು ರಚಿಸಿದ ವಸ್ತುನಿಷ್ಠ ಸಮಕಾಲೀನ ಕೃತಿ–ಶ್ರೀರಾಘವೇಂದ್ರ ವಿಜಯ. ಇದರ ನಿರ್ಮಾತೃ, ಅದ್ಭುತ ಪ್ರತಿಭೆಯ ಭಾವಗಂಭೀರ ಪದ–ಪುಂಜಗಳ ತಾಣ ಮಾತ್ರವಾಗಿರದೇ ಅನುಭಾವಿಯೂ ಆಗಿರುವುದು ಅಪೂರ್ವ.

**ಈ ಕೃತಿಯ ಬಗ್ಗೆ ಹೀಗೊಂದು ಐತಿಹ್ಯವಿದೆ :–** ತುಂಗಾತೀರದಲ್ಲಿ ಆಹ್ನಿಕನಿರತರಾಗಿದ್ದ ಶ್ರೀ ಗುರುಸಾರ್ವಭೌಮರ ಬಳಿ ಶ್ರೀನಾರಾಯಣಾಚಾರ್ಯರು ತಾವು ರಚಿಸಿದ, ಹದಿನಾರು ಸರ್ಗಗಳಿಂದ ಕೂಡಿದ 'ಶ್ರೀರಾಘವೇಂದ್ರ ವಿಜಯ' ಕಾವ್ಯವನ್ನು ಸಮರ್ಪಿಸಿದರಂತೆ. ಶ್ರೀಗುರುರಾಜರು ಶ್ರೀಸುಮಧ್ವವಿಜಯ ಮಹಾಕಾವ್ಯದ ಸರ್ಗಗಳ ಸಂಖ್ಯಾಸಾಮ್ಯವನ್ನು ಬಯಸದೇ ಆರು ಸರ್ಗಗಳನ್ನು ಪ್ರವಾಹಕ್ಕೆ ಅರ್ಪಿಸುವುದರ ಮೂಲಕ ಸುಮಧ್ವವಿಜಯದ ಬಗ್ಗೆ ಮಹಾದರವನ್ನು ವ್ಯಕ್ತಪಡಿಸಿ, ತಮ್ಮ ನುತಿಗಾಗಿ ರೂಪತಳೆದ ಕಾವ್ಯವನ್ನು ಹತ್ತು ಸರ್ಗಗಳಿಗೆ ಸೀಮಿತಗೊಳಿಸಿದರಂತೆ. ಆದ್ದರಿಂದಲೇ ರಾಯರು ಸಂದರ್ಶಿಸಿದ ಅನೇಕ ಕ್ಷೇತ್ರಗಳ ವಿವರ, ವಾಕ್ಯಾರ್ಥ ವಿವರ, ದೈವೀ ಪವಾಡ–ಕೃತಿ ರಚನೆಗಳಿಗೆ ಸಂಬಂಧಿಸಿದ ಮಾಹಿತಿ ಇನ್ನೂ ಉಳಿದಿರುವಂತೆ (ಅಪೂರ್ಣವಾಗಿರುವಂತೆ) ಭಾಸವಾಗುತ್ತದೆ. ಪ್ರಾಯಃ ಆ ಆರುಸರ್ಗಗಳಲ್ಲಿ ಶ್ರೀರಾಯರ 'ಅಗಮ್ಯ ಮಹಿಮೆ' ಸರ್ವವಿದ್ಯಾಪ್ರಾವೀಣ್ಯ'ಗಳು ಬಣ್ಣಿಸಲ್ಪಟ್ಟಿದ್ದವೋ ಏನೋ ! ಆತ್ಮ ಪ್ರಶಂಸೆಯನ್ನು ಮೆಚ್ಚದ, ಪರಮಾತ್ಮ ಪ್ರಶಂಸನೆಯನ್ನೇ ಜೀವನದ ಹೆಗ್ಗುರಿಯಾಗಿಸಿಕೊಂಡ ರಾಯರು ಉದ್ದೇಶಪೂರ್ವಕವಾಗಿಯೇ ಆರು ಸರ್ಗ ನಮಗೆ ದೊರಕದಂತೆ ಮಾಡಿದರೋ ಏನೋ ! ಕಾಲಗರ್ಭದಲ್ಲಿ ಈ ರಹಸ್ಯ ಇನ್ನೂ ಸಂಶೋಧಕರಿಗೆ ಅಭೇದ್ಯವಾಗಿಯೇ ಉಳಿದಿದೆ.

## ಕೃತಿಯ ಸ್ಥೂಲ ಪರಿಚಯ

ಶ್ರೀಲಕ್ಷ್ಮೀನರಸಿಂಹದೇವರ ನಖಸ್ತುತಿಯಿಂದ ಪ್ರಾರಂಭವಾಗುವ ಈ ಕೃತಿ ; ಶ್ರೀಮಧ್ವಗುರುಗಳು ; ಶಾರದೆ ; ತ್ರಿವಿಕ್ರಮಪಂಡಿತರು, ನಾರಾಯಣ ಪಂಡಿತರು, ವ್ಯಾಸರಾಜರು, ವಿಜಯೀಂದ್ರರು, ಸುಧೀಂದ್ರತೀರ್ಥರು, ರಾಘವೇಂದ್ರತೀರ್ಥರೇ ಮೊದಲಾದ ಮಹನೀಯರ ಗುಣಗಳನ್ನು ಬಣ್ಣಿಸಿ, ಅವರ ಕಾರುಣ್ಯದ ಸತ್ಫಲವೇ ಈ ಕೃತಿಯೆಂದು ವಿನಮ್ರತೆಯಿಂದ ಮೆರೆದಿದೆ.

ಹನುಮ–ಭೀಮ–ಮಧ್ವಾವತಾರಗಳ ಹಿನ್ನಲೆ, ಶ್ರೀಮದಾಚಾರ್ಯರ ಮೂಲಪರಂಪರೆ, ಮೂಲರಾಮಪ್ರತಿಮಾ ಪ್ರಭಾವ, ಅದರ ಅರ್ಚಕರಾದ ಸಂಯಮೀಂದ್ರರ ಜೀವನ–ಆದರ್ಶಗಳ ಬಗ್ಗೆ ಸುಂದರ ವಿವರ ನೀಡಿದೆ. ಗೋತ್ರ ಪ್ರವರ್ತಕರಾದ ಗೋತಮ ಋಷಿಗಳ ಚರಿತ್ರೆಯನ್ನು ಬಣ್ಣಿಸಿ, ಆ ಗೋತ್ರದಲ್ಲಿ ಜನಿಸಿದ ಶ್ರೀವೆಂಕಟನಾಥರ ಪೂರ್ವಾಶ್ರಮದ ಮೂರು ತಲೆಮಾರುಗಳ ವರ್ಣನೆಯೊಂದಿಗೆ ತಿಮ್ಮಣ್ಣಭಟ್ಟರ(ಶ್ರೀರಾಘವೇಂದ್ರರ ಪೂರ್ವಾಶ್ರಮದ ತಂದೆ) ವಿದ್ಯಾವೈಭವ–ವಿವಾಹ– ಎರಡು ಮಕ್ಕಳ ಜನನದ ನಂತರ ಶ್ರೀವೆಂಕಟೇಶನ ಸೇವಾ ಭಾಗ್ಯದಿಂದ ದೈವೀಸಂಪತ್ತಿಯನ್ನು ಪಡೆದ 'ವೇಂಕಟನಾಥ'ರ ಜನನದ ವರ್ಣನೆ ಇದೆ. ಶ್ರೀವೆಂಕಟನಾಥಾಚಾರ್ಯರ ಅಕ್ಷರಾಭ್ಯಾಸ–ಉಪನಯನ–ಶಾಸ್ತ್ರಾಭ್ಯಾಸ–ಪ್ರತಿಭೆಗಳ ವಿವರವನ್ನು ಇಲ್ಲಿ ಹೃದಯಂಗಮವಾಗಿ ಬಣ್ಣಿಸಲಾಗಿದೆ. ಅನಂತರ ಕಾಶ್ಯಪಗೋತ್ರದ ಕುಲೀನ ಕನ್ಯೆಯೊಂದಿಗೆ ವಿವಾಹ, ದಾಂಪತ್ಯಜೀವನ, ಕುಲಗುರು ಶ್ರೀಸುಧೀಂದ್ರತೀರ್ಥರಲ್ಲಿ ವಿಶೇಷ ಶಾಸ್ತ್ರಾಧ್ಯಯನ, ವಾಕ್ಯಾರ್ಥಗೋಷ್ಠಿಯಲ್ಲಿ 'ಮಹಾಭಾಷ್ಯಾಚಾರ್ಯ' ಎಂಬ ಬಿರುದಿನ ಲಾಭ, ಬಡತನದಲ್ಲೂ ಅಚಲವಾದ ಶ್ರೀಹರಿಗುರು ಪಾದನಿಷ್ಠೆ, ಸಂತತ ಪಾಠ–ಪ್ರವಚನಗಳ ವಿವರಣೆ ಮನನೀಯವಾಗಿ ಮೂಡಿ ಬಂದಿದೆ. ಶ್ರೀ ಸುಧೀಂದ್ರತೀರ್ಥರಿಂದ ಸಂನ್ಯಾಸಕ್ಕೆ ಆಹ್ವಾನ, ತತ್ತ್ವೋಪದೇಶ, ವಿದ್ಯಾದೇವಿಯ ಸ್ವಾಪ್ನೋಪದೇಶಗಳಿಂದ ಶ್ರೀವೇಂಕಟನಾಥಾಚಾರ್ಯರು 'ಶ್ರೀರಾಘವೇಂದ್ರತೀರ್ಥ'ರೆಂದೆನಿಸಿ ಸರ್ವಜ್ಞ ಪೀಠವನ್ನಲಂಕರಿಸಿದ ಬಗೆ ಬಹು ರಮ್ಯವಾಗಿದೆ.

ಮನ್ನಾರುಗುಡಿ – ರಾಮೇಶ್ವರ – ಮಧುರಾ – ಶ್ರೀರಂಗ –ವಿಷ್ಣುಮಂಗಲ–ಸುಬ್ರಹ್ಮಣ್ಯ–ಉಡುಪಿ ತೀರ್ಥಯಾತ್ರಾ ಮತ್ತು ವಾದಿದಿಗ್ವಿಜಯಗಳು ಎಂಟನೆಯ ಸರ್ಗದಲ್ಲಿ ಸುಂದರವಾಗಿ ಸೆರೆಹಿಡಿಯಲ್ಪಟ್ಟಿದ್ದಾವೆ. ಉಡುಪಿಯಲ್ಲಿ ಶ್ರೀಕೃಷ್ಣನ ಸನ್ನಿಧಿಯಲ್ಲಿ ಬಹುಕಾಲ

ವಾಸ ಮಾಡಿ ಚಂದ್ರಿಕಾ ಪ್ರವಚನ ಮತ್ತು ಚಂದ್ರಿಕಾ ಪ್ರಕಾಶ–ತಂತ್ರದೀಪಿಕಾ–ನ್ಯಾಯಮುಕ್ತಾವಳೀ ಇತ್ಯಾದಿ ಗ್ರಂಥಗಳ ರಚನೆ, ತೀರ್ಥಯಾತ್ರಾ ದಿಗ್ವಿಜಯವರ್ಣನೆ ಮನಸೂರೆಗೊಳ್ಳುತ್ತವೆ. ಗುರುಸಾರ್ವಭೌಮರ ದೈನಂದಿನ ಅನುಷ್ಠಾನುಕ್ರಮ–ದೇವಪೂಜೆ–ಪಾಠ–ಪ್ರವಚನ–ವಾಕ್ಯಾರ್ಥವಿನೋದ ಓದುಗರ ಮನಸೆಳೆಯುತ್ತವೆ. ಹೀಗೆ ಹತ್ತು ಸರ್ಗಗಳ ಈ ಕೃತಿ ಇನ್ನೂ ಇದೆ ಎಂಬ ಭಾವನೆಯನ್ನು ಓದುಗರಿಗೆ ಮೂಡಿಸುತ್ತಲೇ ಸಮಾಪ್ತಿ ಪಡೆದಿದೆ.

**ಗುರುವಂದನೆ**

ಮೊದಲ ಸರ್ಗದಲ್ಲಿ ಶ್ರೀನಾರಾಯಣಾಚಾರ್ಯರು ಮಾಡಿದ ಗುರುಪರಂಪರೆಯ ಹಿರಿಮೆ–ಗರಿಮೆಗಳ ಬಣ್ಣನೆ ಚೇತೋಹಾರಿಯಾಗಿದೆ :–

'ಶ್ರೀ ವೇದವ್ಯಾಸರ ಸೂತ್ರಗಳ ವಿಶ್ವತೋಮುಖ ವೈಭವವನ್ನು ಹೃದಯಂಗಮವಾಗಿ ಬಣ್ಣಿಸಿದ ಶ್ರೀವ್ಯಾಸರಾಜರ ಪ್ರೌಢಿಮೆಯನ್ನು ಕಂಡ ಯಾವ ಪಂಡಿತನು ಅವರ ದಾಸನೆನಿಸನು ?

ವ್ಯಾಸಸೂತ್ರಪದಾರ್ಥೋಪನ್ಯಾಸಮಾಕರ್ಣ್ಯ ಮಾನ್ಯಪಿ ।
ವ್ಯಾಸರಾಜಸ್ಯ ಭಜತೇ ದಾಸತಾಂ ಕೋ ನ ಕೋವಿದಃ ॥ ೧.೮

ಅರವತ್ನಾಲ್ಕು ಕಲೆಗಳಲ್ಲಿ ಪಾರಂಗತರಾದ, ತಮ್ಮ ವರ್ಚಸ್ಸಿನಿಂದ ವಿದ್ವಾಂಸರೆಲ್ಲರ ಕಾಂತಿಯನ್ನು ಅಪಹರಿಸಿದ, ಕೀರ್ತಿಯೇ ಧರೆಗಿಳಿದು ಮೂರ್ತಿಮತ್ತಾಗಿ ಬಂದಂತಿರುವ ಶ್ರೀ ವಿಜಯೀಂದ್ರರೆಂಬ ಜ್ಞಾನಜ್ಯೋತಿಗೆ ನನ್ನ ನಮನಗಳನ್ನು ಅರ್ಪಿಸುತ್ತೇನೆ :–

ಚತುಷ್ಷಷ್ಟಿಕಲಾವಿದ್ಯಾಜುಷೇ ವಿದ್ವನ್ಮಹೋಜುಷೇ ।
'ಜಯೀಂದ್ರಜ್ಯೋತಿಷೇ ಕುರ್ಯಾಂ ವಂದನಾನಿ ಯಶೋಜುಷೇ ॥

'ಮೀಮಾಂಸಾಶಾಸ್ತ್ರ – ವ್ಯಾಕರಣಶಾಸ್ತ್ರ – ನ್ಯಾಯಶಾಸ್ತ್ರ – ವ್ಯಾಸರಿಂದ ಪ್ರಣೀತವಾದ ಬ್ರಹ್ಮ ಮೀಮಾಂಸಾಸೂತ್ರಗಳಿಗೆ ಸಂಬಂಧಿಸಿದಂತೆ ಶ್ರೀವಿಜಯೀಂದ್ರರು ರಚಿಸಿದ ಪಾಂಡಿತ್ಯ – ಪ್ರತಿಭಾಪೂರ್ಣ ಕೃತಿಗಳನ್ನು ವಿದ್ವಾಂಸರು ಪಾಠ ಕೇಳುವುದಿರಲಿ, ತಪ್ಪಿಲ್ಲದೇ

ಶ್ರೀವಿಜಯೀಂದ್ರರ ೧೦೪ ಗ್ರಂಥಗಳ ಹೆಸರು ಹೇಳಲಿ. ಅಷ್ಟರಿಂದಲೇ ಅವರನ್ನು ಪಂಡಿತರೆನ್ನಬಹುದು :-

ವಾಕ್ಯೇ ಪದೇ ಪಾದವಿಲೋಚನೋಕ್ತೌ
ವ್ಯಾಸೀಯಶಾಸ್ತ್ರೇ ಚ ಕೃತಾನ್ ಪ್ರಬಂಧಾನ್ ।
ಆಸ್ತಾಂ ಬುಧಃ ಶ್ರೋತುಮಶೇಷಮೇಷಾ
ಮಾಖ್ಯಾಃ ಸಮಾಖ್ಯಾದ್ ಯದಿ ಪಂಡಿತೋಽಸೌ ॥ ರಾ.ವಿ. ॥೨೨

'ಶಬ್ದ ಪ್ರಪಂಚದ ಸಾರ್ವಭೌಮರಾದ ತಾವೇ ಅನೇಕ ಗದ್ಯ – ಪದ್ಯ – ಚಂಪೂ ಗ್ರಂಥಗಳನ್ನು ರಚಿಸಿ, ವಿದ್ವಾಂಸರಿಗೆ ಸ್ಫೂರ್ತಿಮೂಲರಾದ ಶ್ರೀ ಸುಧೀಂದ್ರತೀರ್ಥರನ್ನು ಭಕ್ತಿಯಿಂದ ನಮಿಸುತ್ತೇನೆ.

ಸುಧೀಂದ್ರಯೋಗಿನಂ ಸೇವೇ ಸಾಧುಸಾತ್ಕೃತಸಂಪದಮ್ ।
ಸಗದ್ಯಪದ್ಯನಿರ್ಮಾಣವಿದ್ಯಾಯಾಃ ಪರಮಂ ಪದಮ್ ॥

'ಕಲ್ಪವೃಕ್ಷದಂತೆ, ಬಯಸಿದವರ ಮನದಿಷ್ಟಾರ್ಥಗಳನ್ನು ನೆರವೇರಿಸುವ ಶ್ರೀರಾಘವೇಂದ್ರರ ಪಾದಕಮಲಗಳನ್ನು ನಮಿಸುತ್ತೇನೆ'.

"ಇಪ್ಪತ್ನಾಲ್ಕು ಸಾವಿರ ಗ್ರಂಥಗಳಿಂದ ಕೂಡಿರುವ ಶ್ರೀಮದ್ರಾಮಾಯಣವನ್ನು ಕೇವಲ ಹತ್ತೇ ಸ್ರಗ್ಧಾರಾವೃತ್ತದ ಶ್ಲೋಕಗಳಲ್ಲಿ ಸಂಗ್ರಹಿಸಿ ನೀಡುವ ಮೂಲಕ ವಾಲ್ಮೀಕಿ ಕಥೆಗಳ ಪವಿತ್ರಸ್ಮೃತಿ ತರುವ ಗುರುಗಳನ್ನು ನಮಿಸುತ್ತೇನೆ" ೧.೧೨

'ದೇವತೆಗಳಲ್ಲಿ ದೇವೇಂದ್ರನಂತೆ ಯೋಗಿಗಳಲ್ಲಿ ಭಗವಾನ್ ದತ್ತನಂತೆ, ಸಮುದ್ರಗಳಲ್ಲಿ ಕ್ಷೀರಸಮುದ್ರದಂತೆ, ಗುರುಗಳಲ್ಲಿ ಶ್ರೀಪೂರ್ಣಪ್ರಜ್ಞರಂತೆ ನನ್ನ ಗುರುಗಳು ಪ್ರಸಿದ್ಧರಾಗಿದ್ದಾರೆ. ಆದ್ದರಿಂದಲೇ ನನ್ನ ಮನಸ್ಸು ಅವರಲ್ಲಿ ಆಕರ್ಷಿತವಾಗಿದೆ. ೧.೨೭

'ಆದಿಗುರುಗಳಾದ ಶ್ರೀಮಧ್ವರು ತನ್ನ ಸಿದ್ಧಾಂತ ಪ್ರತಿಷ್ಠಾಪನಾಪಟುಗಳಾದ ಶ್ರೀ ರಾಘವೇಂದ್ರರನ್ನು ಕಂಡು, ನಿಶ್ಚಿಂತರಾಗಿ ಬದರಿಯಲ್ಲಿ ಶ್ರಿ ವ್ಯಾಸರ ಸನ್ನಿಧಿಯಲ್ಲಿ ಕುಳಿತಂತಿದೆ. ಆದ್ದರಿಂದಲೇ ಅಂತಹ ಮಹನೀಯರಾದ ಶ್ರೀರಾಯರಲ್ಲಿ ನನ್ನ ಮನಸ್ಸು ಲೀನವಾಗಿದೆ :–

ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ ।
ಶ್ರುತ್ವಾಽಯಮ್ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥ ೧.೩೬

'ಬ್ರಾಹ್ಮಣ ಪರಿಪಾಲನ ರೂಪವಾದ ತನ್ನ ಕಾರ್ಯವನ್ನು ಶ್ರೀರಾಘವೇಂದ್ರರು ಸಮರ್ಥವಾಗಿ ನಿರ್ವಹಿಸುವುದನ್ನು ಕಂಡು, ಶೇಷನ ಮೇಲೆ ಪವಡಿಸಿದ ಶ್ರೀಹರಿ ನಿಶ್ಚಿಂತನಾಗಿ ನಿದ್ರಿಸುತ್ತಿರುವಂತಿದೆ. ಆದ್ದರಿಂದ ಅಂತಹ ಮಹನೀಯರಲ್ಲಿ ನನ್ನ ಮನಸ್ಸು ಆಸಕ್ತವಾಗಿದೆ. ೧.೩೭

## ಭವ್ಯ ಪರಂಪರೆ

ಯಾವ ದಿವ್ಯಪೀಠದಲ್ಲಿ ಶ್ರೀ ಗುರು ರಾಘವೇಂದ್ರತೀರ್ಥರು ವಿರಾಜಮಾನರಾಗಿದ್ದಾರೋ, ಆ ಪೀಠದಲ್ಲಿ ಅಸೀನರಾಗಿದ್ದ ಪ್ರಾಚೀನರ ಪುಣ್ಯಸ್ಮೃತಿಯನ್ನು ಶ್ರೀನಾರಾಯಣಾಚಾರ್ಯರು ಎರಡನೆಯ ಸರ್ಗದಲ್ಲಿ ಮಾಡಿಕೊಟ್ಟಿದ್ದಾರೆ –

ಶ್ರೀ ಹಂಸನಾಮಕ ಪರಮಾತ್ಮನಿಂದ ಬಂದ ಜ್ಞಾನಪ್ರವಾಹವನ್ನು ಉಳಿಸಿ ಬೆಳೆಸುವ ದೀಕ್ಷೆ ಹೊತ್ತ ದೂರ್ವಾಸರು – ಪ್ರಾಜ್ಞತೀರ್ಥರು – ಪರತೀರ್ಥರು ಅಚ್ಯುತ ಪ್ರಜ್ಞರಂತಹ ಹಿರಿಯ ಅನಾಭಾವಿಗಳ ನಂತರ, ವಾಯ್ವಂಶಸಂಭೂತರಾದ ಶ್ರೀಮದಾಚಾರ್ಯರು ಸಜ್ಜನರ ಉದ್ಧಾರಕ್ಕಾಗಿ ತತ್ತ್ವವಾದದ ತುತ್ತೂರಿ ಮೊಳಗಿಸಲು ಧರೆಗಿಳಿದು ಬಂದರು. ಚತುರ್ವಿಧ ಪುರುಷಾರ್ಥ ಸಾಧನವಾದ ಶ್ರೀಮೂಲರಾಮ ಪ್ರತಿಮೆಯನ್ನು ಪೂಜಿಸಿ, ಅದನ್ನು ಶ್ರೀಮಧ್ವರು ತಮ್ಮ ಜ್ಯೇಷ್ಠ ಹಾಗೂ ಶ್ರೇಷ್ಠಶಿಷ್ಯರಾದ ಶ್ರೀ ಪದ್ಮನಾಭತೀರ್ಥರಿಗೆ ಕರುಣಿಸಿದರು.

ಅವರಿಂದ ಅನುಕ್ರಮವಾಗಿ ಶ್ರೀನರಹರಿತೀರ್ಥರು, ಮಾಧವತೀರ್ಥರು – ಅಕ್ಷೋಭ್ಯತೀರ್ಥರೇ ಮೊದಲಾದ ಯತಿಪುಂಗವರು ಅದನ್ನು ಪೂಜಿಸಿ ತತ್ತ್ವವಾದವನ್ನು ಪ್ರಸಾರ ಮಾಡಿದರು. ಟೀಕಾಚಾರ್ಯರೆಂದೇ ವಿಖ್ಯಾತರಾದ ಶ್ರೀಮಜ್ಜಯತೀರ್ಥ ಪೂಜ್ಯಚರಣರು ನಂತರ ಈ ಪೀಠದಲ್ಲಿದ್ದು ಶ್ರೀಮಧ್ವರ ತತ್ತ್ವವಾದ ಪರಿಪೂರ್ಣ ಸಿದ್ಧಾಂತವೆಂದು ವಿಶ್ವಕ್ಕೆಲ್ಲ

ಮನದಟ್ಟುಮಾಡಿಕೊಟ್ಟರು. ಈ ಭವ್ಯ ಪರಂಪರೆಯಲ್ಲಿ ಬಂದವರು ಶ್ರೀವಿದ್ಯಾಧಿರಾಜರು ಶ್ರೀ ಕವೀಂದ್ರ ತೀರ್ಥರು – ಶ್ರೀ ವಾಗೀಶ ತೀರ್ಥರು – ಶ್ರೀ ರಾಮಚಂದ್ರ ತೀರ್ಥರು ಶ್ರೀ ವಿಬುಧೇಂದ್ರ ತೀರ್ಥರು – ಶ್ರೀ ಜಿತಾಮಿತ್ರ ತೀರ್ಥರು – ಶ್ರೀ ರಘುನಂದನ ತೀರ್ಥರು – ಶ್ರೀ ಸುರೇಂದ್ರ ತೀರ್ಥರು – ಶ್ರೀ ವಿಜಯೀಂದ್ರ ತೀರ್ಥರು – ಶ್ರೀ ಸುಧೀಂದ್ರ ತೀರ್ಥರು. ಈ ಮಹನೀಯರೆಲ್ಲರೂ ಸೂರ್ಯದೇವನಂತೆ ತೇಜಸ್ವಿಗಳೂ – ಧರ್ಮದ ಸಾಕಾರ ಮೂರ್ತಿಗಳೂ – ಸದಾಚಾರ ಸತ್ಸಂಪ್ರದಾಯ ಪರಂಪರಾಪರಿಪಾಲಕರೂ ಪಾಠ – ಪ್ರವಚನ – ಗ್ರಂಥ ನಿರ್ಮಾಣದಿಂದ ಸಜ್ಜನ ವೃಂದದ ಮೇಲೆ ವಾತ್ಸಲ್ಯದ ಮಹಾಪೂರವನ್ನೇ ಹರಿಸಿ ವಿಖ್ಯಾತರಾದವರು. ಇಂತಹ ಪರಂಪರೆಯಲ್ಲಿ ಬಂದ ಪದ – ವಾಕ್ಯ – ಪ್ರಮಾಣ ಪಾರಾವಾರ ಪಾರಂಗತರಾದ ಶ್ರೀ ಸುಧೀಂದ್ರ ತೀರ್ಥರಲ್ಲಿ, ಗಾರ್ಹಸ್ಥ್ಯಜೀವನವನ್ನು ಕೆಲವು ವರ್ಷ ನಡೆಸಿದ ಶ್ರೀ ವೇಂಕಟನಾಥಾಚಾರ್ಯರು ವಿಶೇಷಾಧ್ಯಯನಕ್ಕಾಗಿ ಕುಂಭಕೋಣಕ್ಕೆ ಆಗಮಿಸಿದರು.

**ಕುಂಭಕೋಣ ವರ್ಣನೆ**

ಕುಂಭಕೋಣ ಕ್ಷೇತ್ರ ವರ್ಣನೆಯಲ್ಲಿ ಶ್ರೀ ನಾರಾಯಣಾಚಾರ್ಯರು ತೋರಿದ ಪ್ರತಿಭೆ – ಕೌಶಲಗಳು ಅಸಾಧಾರಣವಾಗಿದೆ. ಕುಂಭಕೋಣದ ಜನತೆಯ ಪಾಂಡಿತ್ಯ ಮತ್ತು ಸಮೃದ್ಧಿಯನ್ನು ಬಣ್ಣಿಸುವ ಕವಿಯ ಕಲ್ಪನಾವಿಹಾರದ ಈ ಎರಡು ಪದ್ಯಗಳನ್ನು ಗಮನಿಸಿ :

'ಕುಂಭಕೋಣನಗರಿ ಗಗನ ಚುಂಬಿ ಕಟ್ಟಡಗಳ ತಾಣವಾಗಿತ್ತು. ಕಟ್ಟಡದ ವಿವಿಧ ಪಾರ್ಶ್ವಗಳಲ್ಲಿ ಅನೇಕ ಹಕ್ಕಿಗಳು ಆಸರೆ ಪಡೆದಿದ್ದವು. ದೇವಲೋಕದ ನಂದನವನದಲ್ಲಿ ವಿಹರಿಸುವ ಪಕ್ಷಿಗಳು ಆಗಸದಲ್ಲಿ ಹಾರಾಡುವಾಗ, ಗಗನಚುಂಬಿ ಕಟ್ಟಡಗಳಲ್ಲಿ ನೆಲಸಿದ ಕುಂಭಕೋಣ ನಗರದ ಪಕ್ಷಿಗಳಿಗೂ, ಸಗ್ಗದ ಪಕ್ಷಿಗಳಿಗೂ ಸುಮಧುರ ಸಮ್ಮಿಲನವಾಗುತ್ತಿದ್ದಿತು.

ಇವೆರಡೂ ಗುಂಪುಗಳ ಸಮಾಗಮದಲ್ಲಿ ಪಕ್ಷಿಜಾತಿಗಳ ಭಾಷೆಯಿಂದ ಮಾತ್ರವಲ್ಲದೇ ಸಂಸ್ಕೃತ ಭಾಷೆಯಿಂದ ನಡೆದ ಚರ್ಚಾಗೋಷ್ಠಿ – ಪ್ರಾಸಗರ್ಭಿತ ಮಾತುಗಾರಿಕೆ – ವ್ಯವಹಾರ ಕೌಶಲಗಳಲ್ಲೂ ಕುಂಭಕೋಣದ ಪಕ್ಷಿಗಳೇ ವಿಜಯ ಮಾಲೆಯನ್ನು ಧರಿಸುತ್ತಿದ್ದವು.

ನ ಕೇವಲಂ ಯದ್ವಲಭೀವಿಹಂಗಾ ಪ್ರಾಂಶುಸ್ಥಿತಾ ನಂದನನೀಡಭಾಜಃ ।
ಗೀರ್ವಾಣವಾಣ್ಯಾ ವಿಹಗಾನ್ ವಿವಾದೈಃ ವಿಜಿಗ್ಯಿರೇ ಹಂತ ವಿಚಿತ್ರವಾಗ್ಭಿಃ ॥
೧.೩೧

(ಇಲ್ಲಿ ಕವಿ ಗಗನ ಚುಂಬಿಕಟ್ಟಡಗಳು ಕುಂಭಕೋಣದಲ್ಲಿವೆ ಎಂದು ವರ್ಣಿಸುವ ಮೂಲಕ ನಗರದ ಸಮೃದ್ಧಿಯನ್ನೂ, ಇಲ್ಲಿನ ಪಕ್ಷಿಗಳು ದೇವಲೋಕದ ಪಕ್ಷಿಗಳೊಡನೆ ವಾದ ಕೌಶಲದಿಂದ ವಿಜಯಪಡೆದವು ಎಂಬ ವರ್ಣನೆಯ ಮೂಲಕ, ಪಾಂಡಿತ್ಯ ಇಲ್ಲಿ ಹಾಸು ಹೊಕ್ಕಾಗಿದೆ, ಸರಸ್ವತಿಯ ಒಲುಮೆ ಎಲ್ಲೆಲ್ಲೂ ಇದೆ ಎಂಬುದನ್ನೂ ಸುಂದರವಾಗಿ ಚಿತ್ರಿಸಿದ್ದಾರೆ.)

ಬೇಸಿಗೆಯಲ್ಲಿ ಮಧ್ಯಾನ್ಹದ ಬಿಸಿಲಬೇಗೆಯಿಂದ ಬಸವಳಿದ ನಮಗೆ ಸೂರ್ಯಗತಿ ವಿಲಂಬವಾಗಿರುವಂತೆ ಭಾಸವಾಗುತ್ತದೆ. ಈ ಅಂಶಕ್ಕೆ ಸುಂದರ ಕಾಲ್ಪನಿಕ ರೂಪ ನೀಡಿದ ಕವಿಯ ಪ್ರತಿಭೆ ನೋಡಿ :–

“ಕುಂಭಕೋಣದ ಯುವತಿಯರು ಕಟ್ಟಡದ ಮೇಲ್ಭಾಗದಲ್ಲಿ ತಮ್ಮನ್ನು ಸಿಂಗರಿಸಿಕೊಂಡು ವಿಹರಿಸುತ್ತ, ಧರಿಸಿ ಉಳಿದ ಕಸ್ತೂರಿಯನ್ನು ನಿರ್ಲಕ್ಷ್ಯದಿಂದ ಬಿಸುಟುತ್ತಿದ್ದರು. ಕಸ್ತೂರಿಯೊಡನೆ ಅಲಂಕಾರಕ್ಕೆ ಬಳಸುವ ನೀರು – ತೈಲ ಮುಂತಾದ ದ್ರವವಸ್ತು ಸೇರಿ ಅಲ್ಲಿ ಕೆಸರಿನಂತಾಗಿತ್ತು. ಮಧ್ಯಾನ್ಹ ಸೂರ್ಯನ ರಥ ಚಕ್ರಗಳು ಈ ಕೆಸರಲ್ಲಿ ಸಿಲುಕಿ ಹೂತು ಹೋದಾಗ ರಥವನ್ನು ಎಳೆಯುವ ಕುದುರೆಗಳೂ ಬಳಲಿದ ಕಾರಣ ವಿಲಂಬ ಗತಿಯಲ್ಲಿ ಮಧ್ಯಾನ್ಹ ಸಾಗಿದಂತೆ ಕಾಣುತ್ತಿತ್ತು.“

ಮಾಧ್ಯಂದಿನೇ ಯೌವತನರ್ಮಕೀರ್ಣಕಸ್ತೂರಿಕಾಪಂಕಿಲಸೌಧಶೃಂಗೇ ।
ರಥಂ ನು ಮಗ್ನಂ ಪರಿಕೃಷ್ಯ ಯಸ್ಯಾಂ ಶ್ರಾಂತೋಽರ್ಕವಾಜೀ
ಸಮಯಾಕರೋತಿ ॥ ೧.೩೪

“ಕುಂಭಕೋಣದಲ್ಲಿ ಜನಿಸಿದ ಪುಟ್ಟ ಮಕ್ಕಳೂ ಶಾಸ್ತ್ರವ್ಯಾಖ್ಯಾನ ಮಾಡುತ್ತಿದ್ದವು. (ವಿದ್ಯೆ ಇಲ್ಲಿ ಅನುವಂಶಿಕವಾಗಿ ರಕ್ತಗತವಾಗಿ ಹರಿದು ಬಂದಿತ್ತು) ಬೆಳಿಗ್ಗೆ ಮತ್ತು ಸಂಜೆ ನಡೆಸಲ್ಪಡುವ ಹೋಮ–ವೈಶ್ವದೇವಾದಿಗಳಿಂದ ಹೊಮ್ಮಿದ ಧೂಮದಿಂದ ಆಕ್ರಾಂತವಾದ ಆಗಸವು ರೂಪವಿಹೀನವಾದರೂ ನೀಲ ವರ್ಣವಿಶಿಷ್ಟವಾಗಿ ಭಾಸವಾಗುತ್ತಿತ್ತು.

ಗ್ರಾಮೇ ಗ್ರಾಮೇಽಧ್ಯಾಪಕಾ ಜಾತಮಾತ್ರಾ ಗೇಹೇ ಗೇಹೇ
ಸರ್ವಶಾಸ್ತ್ರಾಗಮಾನಾಮ್ ।
ಸಾಯಂಪ್ರಾತರ್ಹೋಮಧೂಮಾತಿನೀಲಂ

ರೂಪೋಪೇತಂ ಯತ್ರ ನೀರೂಪಮಭ್ರಂ ॥ **VI.4.**

ನಿರಂತರಾಧ್ಯಯನ – ವಾದಿದಿಗ್ವಿಜಯ

ಶ್ರೀ ವೆಂಕಟನಾಥಾಚಾರ್ಯರು – 'ವ್ಯಾಕರಣ ಮಹಾಭಾಷ್ಯ – ತತ್ತ್ವ ಚಿಂತಾಮಣಿಯ ಜಯದೇವಮಿಶ್ರನ ವ್ಯಾಖ್ಯೆ,– ಕುಮಾರಿಲಭಟ್ಟರಿಂದ ರಚಿತವಾದ ಶಾಬರಭಾಷ್ಯವ್ಯಾಖ್ಯಾನ, ಬ್ರಹ್ಮಸೂತ್ರಶಾಂಕರಭಾಷ್ಯವ್ಯಾಖ್ಯಾನವಾದ ಭಾಮತೀ, ಪ್ರಭಾಕರಮಿಶ್ರನ ಬೃಹತೀ ಮತ್ತು ಶ್ರೀ ವ್ಯಾಸರಾಜರ ತಾತ್ಪರ್ಯಚಂದ್ರಿಕೆ ಹೀಗೆ ಅವಶ್ಯ ಓದಬೇಕಾದ ಗ್ರಂಥಗಳನ್ನೆಲ್ಲ ನಿರಂತರ ಅಧ್ಯಯನ ಮಾಡುತ್ತಿದ್ದರು.

ಶಾಬ್ದಂ ಭಾಷ್ಯಂ ಜಾಯದೇವೀಂ ಚ ಟೀಕಾಂ ಭಾಟ್ಟಂ ತಂತ್ರಂ
ಭಾಮತೀಂ ಗೌರವಂ ಚ ।
ವ್ಯಾಸಾರ್ಯೋಕ್ತಾಂ ಚಂದ್ರಿಕಾಂ ವೇಂಕಟಾರ್ಯೋ ಯದ್ಯದ್
ವೇದ್ಯಂ ತತ್ತದಭ್ಯಸ್ಯತಿ ಸ್ಮ ॥ VI.07

'ಬೆಳಿಗ್ಗೆ ಎದ್ದು ಶ್ರೀವೆಂಕಟನಾಥಾಚಾರ್ಯರು ಮಂಗಲಕರವಾದ ಶ್ರೀಮದಾಚಾರ್ಯರಿಂದ ಪ್ರಣೀತವಾದ ಸೂತ್ರಭಾಷ್ಯವೇ ಮೊದಲಾದ ಗ್ರಂಥಗಳನ್ನು ಅಭ್ಯಾಸ ಮಾಡುತ್ತಿದ್ದರು. ಎರಡನೆಯ ಯಾಮದಲ್ಲಿ ವ್ಯಾಕರಣ ಮಹಾಭಾಷ್ಯ, ಮೂರನೆಯ ಯಾಮದಲ್ಲಿ ತರ್ಕಶಾಸ್ತ್ರವನ್ನು ಪಠಿಸುತ್ತ ಶಿಷ್ಯರಿಗೆ ಎಲ್ಲ ಶಾಸ್ತ್ರಗಳ ಪ್ರವಚನವನ್ನು ಮಾಡುತ್ತಿದ್ದರು.

ಪ್ರಾತಃ ಸ್ನಾತ್ವಾ ಸಾದು ವೇದಾಂತಭಾಷ್ಯಂ ಶಾಬ್ದಂ ಪಶ್ಚಾತ್
ತರ್ಕಶಾಸ್ತ್ರಂ ತತಃ ಸಃ ।
ಪೂರ್ವಂ ತಂತ್ರಂ ಚಾವದನ್ ವೇಂಕಟಾರ್ಯೋ ತುರ್ಯೇ
ಯಾಮೇ ಕಾಂಶ್ಚಿದಬ್ದಾನನ್ವೈಷೀತ್ ॥ VI.8

ಶ್ರವಣ – ಮನನಗಳಿಲ್ಲದೇ ಕ್ಷಣವನ್ನೂ ವೇಂಕಟನಾಥಾಚಾರ್ಯರು ವ್ಯರ್ಥವಾಗಿ ಕಳೆಯದೇ ದೇವತೋತ್ತಮರಂತೆ ಸಂತತ ಭಗವಚ್ಚಿಂತನೆಯಲ್ಲಿ ಕಾಲ ಕಳೆದರು. ಮಾಯಾವಾದಿಗಳನ್ನು ಮಾಯಾವಾದದಲ್ಲೂ ವ್ಯಾಕರಣಶಾಸ್ತ್ರದಲ್ಲೂ ಗುರುಗಳ ಸನ್ನಿಧಿಯಲ್ಲೇ ವಾಕ್ಯಾರ್ಥಮಾಡಿ ಜಯಿಸಿ, 'ಮಹಾಭಾಷ್ಯಾಚಾರ್ಯ' ಎಂಬ ಬಿರುದು ಪಡೆದರು. ಕೆಲ ಸಮಯ ಭಗವಂತನು ನೀಡಿದ ಬಡತನದ ಅಗ್ನಿಪರೀಕ್ಷೆಯಲ್ಲಿ ಅಚಲನಿಷ್ಠೆಯಿಂದ ಪಾಠ ಪ್ರವಚನರೂಪದವಾದ ತಪಸ್ಸಿನಲ್ಲಿ ಮೈಮರೆತು ಶ್ರೀಹರಿಯ ಒಲುಮೆ ಗಳಿಸಿದರು.

## ಶ್ರೀ ಸುಧೀಂದ್ರೋಪದೇಶ (ಶ್ರೀ ಸುಧೀಂದ್ರಗೀತಾ)

ಗಾರ್ಹಸ್ಥ್ಯದಲ್ಲೂ ಯತಿಗಳಂತೆ ಭಗವನ್ಮುಖರಾದ ಶ್ರೀ ವೆಂಕಟನಾಥಾಚಾರ್ಯರಿಗೆ ಸ್ವಪ್ನ ಸೂಚನೆಯಂತೆ ಶ್ರೀ ಸುಧೀಂದ್ರತೀರ್ಥರು ಸಂನ್ಯಾಸದೀಕ್ಷೆ ನೀಡಲು ಆಹ್ವಾನಿಸಿದರು. ಆಗ ವೆಂಕಟನಾಥರು ನುಡಿದರಂತೆ :– "ಪೂಜ್ಯರೇ ! ನಾನೆಲ್ಲಿ ? ತಮ್ಮಂತಹವರು ಅಲಂಕರಿಸಿದ ವೇದಾಂತಸಾಮ್ರಾಜ್ಯವೆಲ್ಲಿ ? ತಮ್ಮ ಪ್ರಕೃಷ್ಟ–ಪಾಂಡಿತ್ಯವೆಲ್ಲಿ ? ನಾನೆಲ್ಲಿ ? ವಿವೇಕಿಯಾದ ಯಾವ ಮಾನವ, ಭಾರಹೊತ್ತು ಸಮುದ್ರದಾಟುವ ಸಾಹಸ ಮಾಡಿಯಾನು ?"

ಕ್ವಾಹಂ ನ್ಯಾಸಃ ಕುತ್ರ ವಾ ವೇದವಿದ್ಯಾಸಾಮ್ರಾಜ್ಯಂ
ತೇ ಕ್ವಾಽಪಿ ವಿದ್ಯಾಹಮಾರ್ಯ ।
ಪಾರಂ ಸಿಂಧೋರ್ಭಾರಮೂಢ್ವಾ ವಿವೇಕೀ
ಗಂತುಂ ಯತ್ನಂ ಕೋ ಜನಃ ಸಂತನೋತಿ ॥ VI.27

ಆಗ ಶ್ರೀ ಸುಧೀಂದ್ರ ತೀರ್ಥರು ಮರು ನುಡಿದರಂತೆ :–

"ಪರಮಾತ್ಮನಲ್ಲಿ ಅಚಲನಿಷ್ಠೆ – ಇಂದ್ರಿಯನಿಗ್ರಹ – ಧೈರ್ಯ – ಔದಾರ್ಯ – ಮೊದಲಾದ ಅನೇಕ ದೋಣಿಗಳು ನಿಮ್ಮ ಬಳಿ ಇವೆ. ನನ್ನ ವಾತ್ಸಲ್ಯದ ಆಶೀರ್ವಾದವಿದೆ. ಹೀಗಿರುವಾಗ ಸಮುದ್ರ ದಾಟುವುದು ದುಸ್ತರವೆ ?"

"ಹೆಂಡತಿ – ಮಕ್ಕಳು – ಭೋಗವಸ್ತುಗಳಲ್ಲಿ ನಾವು ಮಾಡುವ ಪ್ರೇಮ ನಮ್ಮನ್ನು ಸಂಸಾರದಲ್ಲಿ ಸ್ಥಾಯಿಯಾಗಿಸುತ್ತದೆ. ಸಾಂಸಾರಿಕ ಭೋಗವಸ್ತುಗಳಾವುವೂ ನಮಗೆ ಶಾಶ್ವತ

ಸುಖ ನೀಡಲಾರವು. ಅವು ನೆಮ್ಮದಿ ನೀಡುವುದಕ್ಕಿಂತ ನೋವು, ದುಃಖಗಳನ್ನು ಹೆಚ್ಚಿಸುತ್ತವೆ. ಬದುಕಿಗಾಗಿ ಸಿರಿವಂತರ ಬಳಿ ಹೋಗಿ, –

'ಒಂದು ಕಣ್ಣು ಕಳೆದುಕೊಂಡಿದ್ದರೂ ಅವನನ್ನೂ ಕಮಲದಂತೆ ವಿಶಾಲವಾದ ಕಂಗಳುಳ್ಳವನೆಂದೂ, ಲೋಭಿಯಾಗಿದ್ದರೂ ದಾನಶೀಲನೆಂದೂ, ದುರಾಚಾರಿಯಾಗಿದ್ದರೂ ಸತ್ಕರ್ಮನಿರತನೆಂದೂ, ಲಿಪಿಬಾರದವನನ್ನೂ ಸಾಂಗವೇದಾಧ್ಯಯನ ಚತುರನೆಂದೂ, ಅತ್ಯಂತ ದಡ್ಡನಾಗಿದ್ದರೂ ಪಂಡಿತೋತ್ತಮನೆಂದೂ ಬಣ್ಣಿಸಬೇಕಾಗುವುದು.

ನಮ್ಮಿಂದ ವರ್ಣಿಸಲ್ಪಟ್ಟ ಅಸಂಸ್ಕೃತರಾದ ಸಿರಿವಂತರು ನಮ್ಮನ್ನು ಒಮ್ಮೊಮ್ಮೆ ಅವಮಾನಿಸುವುದಿದೆ. ಅಗತ್ಯಕ್ಕಿಂತ ಕಮ್ಮಿ ನೀಡುವ ಮೂಲಕ ನಮ್ಮ ವೇದನೆಯನ್ನು ಹೆಚ್ಚಿಸುವುದಿದೆ. ಆದ್ದರಿಂದ ಸಂಸಾರ ತೊರೆದು, ಯಾವ ಪರಮಾತ್ಮನ ಚಿಂತನ–ಮಂಥನವನ್ನು ದುಃಖದ ಲೇಪವಿಲ್ಲದ ಅನಿರ್ವಚನೀಯವಾದ ಅಮಂದವಾದ ಆನಂದವನ್ನು ಅನುಭವಿಸಬಲ್ಲೆವೋ ಅಂತಹ ಪರಮಾತ್ಮನ ನಿತ್ಯ ನಿರಂತರ ಉಪಾಸನೆಗಾಗಿ ಸನ್ಯಾಸವನ್ನು ಸ್ವೀಕರಿಸಿರಿ.

## ವಿದ್ಯಾಲಕ್ಷ್ಮಿಯ ಸಂದೇಶ

ಶ್ರೀ ವೆಂಕಟನಾಥಾಚಾರ್ಯರ ಸ್ವಪ್ನದಲ್ಲಿ ಕಾಣಿಸಿಕೊಂಡ ವಿದ್ಯಾದೇವಿ ತನ್ನನ್ನು ಪರಿಚಯಿಸಿಕೊಂಡಳು :

ಶ್ರೀವೇದವ್ಯಾಸರು ನನಗೆ ಪಂಡಿತರಲ್ಲಿ ಆಸೀನಳಾಗಿ ಅನುಗ್ರಹಿಸಲು ಜನ್ಮ ನೀಡಿದರು. ಶ್ರೀಮಧ್ವರು, ವ್ಯಾಸಸೂತ್ರವೆಂಬ ಕಾಮಧೇನುವಿನಲ್ಲಿ ಅಡಕವಾದ ಅಮೃತದ ಸವಿ ಮೀರಿಸಿದ ಹಾಲುಣಿಸಿ (ಭಾಷ್ಯ ರಚಿಸಿ) ನನ್ನನ್ನು ಬೆಳೆಸಿದರು. ಪಂಡಿತ ಸಾರ್ವಭೌಮರಾದ ಶ್ರೀ ಜಯಮುನಿಗಳಿಂದ ನನಗೆ ಯೌವನ ದೊರಕಿತು. ಶ್ರೀ ವ್ಯಾಸರಾಜರು ಬಳ್ಳಿಯಂತೆ ಬಳಕುವ ನನಗೆ ಅಮೃತ (ನ್ಯಾಯಾಮೃತ) ಬೆಳದಿಂಗಳು (ತಾತ್ಪರ್ಯಚಂದ್ರಿಕಾ) ನೀಡಿ ನಾಟ್ಯವೇದಿಕೆ ಕಲ್ಪಿಸಿ (ತರ್ಕತಾಂಡವ ರಚಿಸಿ) ನನ್ನನ್ನು ಪೋಷಿಸಿದರು. ಶ್ರೀ ವಿಜಯೀಂದ್ರ ತೀರ್ಥರು 'ನ್ಯಾಯಾಮೃತ ಕಂಟಕೋದ್ಧಾರ'ವೆಂಬ ರೇಶ್ಮೆ ಪೀತಾಂಬರವನ್ನೂ ಅಮೂಲ್ಯ ಕೃತಿರತ್ನಗಳೆಂಬ ಆಭರಣಗಳನ್ನೂ ಅರ್ಪಿಸಿದರು.

ತರ್ಕತಾಂಡವ ವ್ಯಾಖ್ಯೆ – ಭಾಗವತವ್ಯಾಖ್ಯೆಗಳ ಮೂಲಕ ಶ್ರೀ ಸುಧೀಂದ್ರ ತೀರ್ಥರು ನನಗೆ ವಿಶಾಲ ವಿಹಾರಭೂಮಿ ಮತ್ತು ಉಪವನಗಳನ್ನು ನಿರ್ಮಿಸಿಕೊಟ್ಟರು. ಇನ್ನು ನಾನು ಶ್ರೀ ಸುಧೀಂದ್ರತೀರ್ಥರಲ್ಲಿ ಇರುವುದು ಎರಡು ವರ್ಷ ಮಾತ್ರ. "ಯಾರು ಶ್ರೀ ರಾಮದೇವರ ದಿವ್ಯಪಾದಪದ್ಮಗಳನ್ನು ಪೂಜಿಸುವರೋ ಅವರಲ್ಲಿ ನನಗೆ ವಾಸ್ತವ್ಯ ಮಾಡಲು ಶ್ರೀ ವೇದವ್ಯಾಸರು ವ್ಯವಸ್ಥೆ ಮಾಡಿದ್ದಾರೆ" ನೀವು ಯತಿಗಳಾದಲ್ಲಿ ನಿಮ್ಮಲ್ಲಿ ನಾನು ಪರಮಾನಂದದಿಂದ ಸನ್ನಿಹಿತಳಾಗಿ ಅನುಗ್ರಹಿಸುವೆನು.

**ರಾಮಾರ್ಚಾ ಪೂಜ್ಯತೇ ಯೇನ ತಸ್ಮಿ**
**ವಾಸಂ ಯನ್ಮೇsಕಲ್ಪಯದ್ ವ್ಯಾಸದೇವಃ ।**
**ಕರ್ಮಂದೀಂದ್ರೈರೇವ ಪೂಜಾsಪಿ ಕ್ಲೃಪ್ತಾ**
**ತಸ್ಮಾತ್ತಾಸಹಂ ತೇಷು ನಿತ್ಯಂ ವಸಾಮಿ ॥** VI.53

ನೀವು ಸನ್ಯಾಸ ಸ್ವೀಕರಿಸದಿದ್ದಲ್ಲಿ ವೇದಾರ್ಥಗಳೊಡನೆ ವೈಷ್ಣವ ಸಂಪ್ರದಾಯವೇ ನಶಿಸುವ ಪ್ರಸಂಗವಿದೆ. ಪೂರ್ವಪಕ್ಷಿಗಳಾದ ಮಾಯಾವಾದಿಗಳೇ ಮುಂತಾದವರ ಸೂತ್ರವ್ಯಾಖ್ಯಾನವು ಮಾತ್ರವೇ ಉತ್ಸೂತ್ರಿತವಾಗಿರದೇ, ಪಾಠ – ಪ್ರವಚನವಿಲ್ಲದೆ ಸಂರಕ್ಷಣೆ ಇಲ್ಲದೆಯೇ ಇಲಿಗಳ ಆಹಾರವಾಗಿ ಮಾಯಾವಾದಿಗಳ ಬ್ರಹ್ಮನಂತೆ ಗುಣವಿಲ್ಲದ (ಕಟ್ಟುವ ಹಗ್ಗವಿಲ್ಲದ) ಆ ವೇದಾಂತ ಪುಸ್ತಕಗಳೂ, ಉತ್ಸೂತ್ರಿತವಾಗುತ್ತವೆ. (ಕಟ್ಟುವ ಹಗ್ಗವಿಲ್ಲದಂತಾಗುತ್ತವೆ.) ಅವ್ಯುತ್ಪನ್ನರು ಮೂರ್ಖರು ಅಲ್ಪ ಸ್ವಲ್ಪ ಶಬ್ದಶಾಸ್ತ್ರದ ಪರಿಚಯವಿರುವವರೂ ಶ್ರೀ ಮನ್ನ್ಯಾಯಸುಧೆಯ ಗಾಂಭೀರ್ಯವರಿಯದೇ ಪಾಠ–ಪ್ರವಚನಗಳಲ್ಲಿ ತೊಡಗುವ ಅಪಾಯವಿದೆ. ವಿದ್ವತ್ ಸಭೆಗಳಲ್ಲಿ ಗಣಪತಿ ಅಥವಾ ಶಕ್ತಿಯೇ ಸರ್ವೋತ್ತಮರೆಂಬ ವಾದ ನಡೆದೀತು. ನಿರಂತರ ವೇದಘೋಷ – ಪಾಠ – ಪ್ರವಚನಗಳ ಮಂಗಳನಾದವುಳ್ಳ ಮಠಗಳು, ನಾಯಿ – ನರಿಗಳ ಬಂದೀಖಾನೆಯಾಗಿ ರುದ್ರಘೋಷದ ತಾಣವಾದಾವು. ಆದ್ದರಿಂದ ನೀವು ಸನ್ಯಾಸ ಸ್ವೀಕರಿಸಲೇಬೇಕು.

ಸ್ವಭಾವತಃ ವಿರಕ್ತರಾದ ಶ್ರೀವೇಂಕಟನಾಥಾಚಾರ್ಯರು ಕುಮಾರನಿಗೆ ಉಪನಯನ ಮಾಡಿ ಹೆಂಡತಿಯ ರಕ್ಷಣೆಯ ವ್ಯವಸ್ಥೆ ಮಾಡಿ ಸನ್ಯಾಸದೀಕ್ಷೆ ಪಡೆಯಲು ಶ್ರೀ ಸುಧೀಂದ್ರತೀರ್ಥರಲ್ಲಿ ಆಗಮಿಸಿದರು. (ವಸಿಷ್ಠರಿಗೆ ಅರುಂಧತಿಯಂತೆ, ಕರ್ದಮರಿಗೆ ದೇವಹೂತಿಯಂತೆ, ಶ್ರೀವೇಂಕಟನಾಥಾಚಾರ್ಯರ ನೆರಳಿನಂತೆ, ಅವರ ಭಗವನ್ಮಯ ಬದುಕಿಗೆ

ಇಂಬು ನೀಡುತ್ತ, ಅವರ ಸೇವೆಯಲ್ಲಿಯೇ ತನ್ನ ಜೀವನದ ಸಾರ್ಥಕ್ಯವನ್ನು ಕಾಣುತ್ತಿದ್ದ ಅವರ ಮಡದಿ ಸರಸ್ವತೀ ದೇವಿಯು, ಆಶ್ರಮ ಸ್ವೀಕರಿಸಿದ ವಾರ್ತೆ ತಿಳಿದೊಡನೆ ದುಃಖ ತಾಳಲಾಗದೇ ದೇಹ ತೊರೆದರು. ಶ್ರೀವೆಂಕಟನಾಥರ ಸೇವೆಯ ಫಲದಿಂದ ಅವರ ಕಾರುಣ್ಯಪಾತ್ರರಾಗಿದ್ದ ಕಾರಣ ಸದ್ಗತಿಯನ್ನು ಪಡೆದರು. – "ನ ದೇವ ತೋಷಣಂ ವೃಥಾ" ಅಲ್ಲವೆ ?)

## ಶ್ರೀ ರಾಘವೇಂದ್ರೋ ವ್ರತಿರಾಟ್

ವಿರಜಾಹೋಮ ಮುಂತಾದ ವೈದಿಕ ವಿಧಾನಗಳ ನಂತರ ಶ್ರೀ ಸುಧೀಂದ್ರ ತೀರ್ಥರು ಶ್ರೀ ವೆಂಕಟನಾಥಾಚಾರ್ಯರಿಗೆ "ಶ್ರೀರಾಘವೇಂದ್ರತೀರ್ಥ"ರು ಎಂಬುದಾಗಿ ನಾಮಕರಣ ಮಾಡಿ ಶಂಖದಿಂದ ಅಭಿಷೇಕ ಮಾಡಿ, ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರನ್ನಾಗಿಸಿದರು. "ತಪಸ್ಸಿನಲ್ಲಿ ಶ್ರೀ ಸುರೇಂದ್ರತೀರ್ಥರಂತೆಯೂ ಕೀರ್ತಿಯಲ್ಲಿ ಶ್ರೀ ವಿಜಯೀಂದ್ರತೀರ್ಥರಂತೆಯೂ, ವಾದಿಗಳೊಡನೆ ವಾಕ್ಯಾರ್ಥದಲ್ಲಿ ನಮ್ಮಂತೆ ವಿಖ್ಯಾತರೂ ಆಗಿರಿ" ಎಂದು ಹೃದಯದುಂಬಿ ಆಶೀರ್ವದಿಸಿದರು.

> ಶ್ರೀಸುರೇಂದ್ರವದಯಂ ತಪಸ್ಯಯಾ ಶ್ರೀಜಯೀಂದ್ರ ಇವ ಕೀರ್ತಿಸಂಪದಾ ।
> ವಿಶ್ರುತೋऽಹಮಿವ ವಾದಸಂಗರೇ ರಾಘವೇಂದ್ರಯತಿರಾಟ್
> ಸಮೇಧತಾಮ್ ॥ VI.72

## ತೀರ್ಥಯಾತ್ರೆ – ಗ್ರಂಥ ರಚನೆ

ಮನ್ನಾರುಗುಡಿ, – ರಾಮೇಶ್ವರ – ಮಧುರಾ – ಶ್ರೀರಂಗ – ವಿಷ್ಣುಮಂಗಲ – ಸುಬ್ರಹ್ಮಣ್ಯ – ಉಡುಪಿ – ತಿರುಪತಿ – ಕಾಂಚೀ ಮುಂತಾದ ಕ್ಷೇತ್ರಗಳಲ್ಲಿ ಶ್ರೀ ಗುರುರಾಜರು ಸಂಚರಿಸುತ್ತ, ತಮ್ಮ ಪಾವನಪಾದಗಳಿಂದ ಭೂಮಿಯನ್ನು ಮತ್ತು ಸಜ್ಜನರನ್ನು ಪುನೀತಗೊಳಿಸುತ್ತ, ದುರ್ವಾದಿಗಳೊಡನೆ ವಾಕ್ಯಾರ್ಥಮಾಡಿ, ದ್ವೈತದುಂದುಭಿಯನ್ನು ಮೊಳಗಿಸುತ್ತ ದಿಗ್ವಿಜಯ ಮಾಡಿದರು. ಪ್ರಮಾಣ ಪದ್ಧತಿಯಿಂದ ಆರಂಭಿಸಿ, ತಾತ್ಪರ್ಯಚಂದ್ರಿಕಾ ಗ್ರಂಥದವರೆಗೆ, ಅನೇಕ ಶಿಷ್ಯ ವೃಂದಕ್ಕೆ ಪ್ರವಚನ ನಡೆಸುತ್ತಿದ್ದರು.

ಉಡುಪಿಯಲ್ಲಿ ಶ್ರೀ ಗುರುರಾಜರು ಅನೇಕ ವರ್ಷಗಳ ಕಾಲ ನೆಲಸಿದ್ದರು. ತಾತ್ಪರ್ಯಚಂದ್ರಿಕಾ ಪ್ರಕಾಶ ರಚನೆ ಇಲ್ಲಿ ನಿರಂತರವಾಗಿ ನಡೆಯಿತು. ಶ್ರೀ ರಾಘವೇಂದ್ರತೀರ್ಥರು ಎಲ್ಲ ಶಾಸ್ತ್ರಗ್ರಂಥಗಳನ್ನು ಓದಿ ಅರಗಿಸಿಕೊಂಡದ್ದಲ್ಲದೇ, ವಿಭಿನ್ನ ಶಾಸ್ತ್ರ ಗ್ರಂಥಗಳಲ್ಲಿರುವ ವಿಷಯಗಳ ಸ್ಪಷ್ಟ ಮಾಹಿತಿಯ ಜೊತೆಗೆ ಅಲ್ಲಿರುವ ಅಕ್ಷರಗಳ ಸಂಖ್ಯೆಯನ್ನೂ ಕರಾರುವಾಕ್ಕಾಗಿ ಹೇಳಬಲ್ಲವರಾಗಿದ್ದರು. ಇಂತಹ ಅದ್ಭುತ ಸ್ಮೃತಿ ಶಕ್ತಿ ದೈವೀ ಜ್ಞಾನಸಂಪತ್ತಿ ಅವರದಾಗಿತ್ತು.

ಚಂದ್ರಿಕಾವಿವರಣಂ ಸಮತಾನೀತ್ ಸಂಚರನ್ನಪಿ ಸ ಪುಣ್ಯಮಹೀಷು ।
ವೇತ್ತಿ ವರ್ಣನಿಚಯಂ ಸಮಯಾನಾಂ ಸಂಖ್ಯಯಾ
ಸಹ ಧಿಯೈಷ ಸಹಾರ್ಥೈಃ ॥ VIII.8

ನ್ಯಾಯಮುಕ್ತಾವಲೀ – ತಂತ್ರದೀಪಿಕಾ ಮೊದಲಾದ ಅನೇಕ ಅಮೂಲ್ಯ ಕೃತಿಗಳ ರಚನೆಯೂ ನಡೆಯಿತು. ಹೀಗೆ ಶ್ರೀ ಮಂತ್ರಾಲಯಪ್ರಭುಗಳು ಅನೇಕ ಕೃತಿಗಳನ್ನು ಸಾರಸ್ವತ ಪ್ರಪಂಚಕ್ಕೆ ನೀಡಿ, ತತ್ತ್ವಜ್ಞಾನದ ಶುದ್ಧಮುಖವನ್ನು ಪರಿಚಯಿಸಿ, ಸಜ್ಜನರನ್ನು ಅನುಗ್ರಹಿಸಿದ್ದಾರೆ. **ಅಂತಹ ಭೂಮಾಪುರುಷರ ಪುಣ್ಯಸ್ಮೃತಿ ಬಾಳ ಬಿಡುಗಡೆಯ ದಾರಿ, ಐಸಿರಿಗೆ ತವರು.**